**ಪತ್ರಿಕಾ ಪ್ರಕಟಣೆ**

**ವಿಜಯಪುರ**

**ದಿನಾಂಕ: 02.07.2021**

# ಅಕ್ರಮವಾಗಿ ಗಾಂಜಾ ಮಾರಾಟ ಮಾಡುವ ಆರೋಪಿತರ ಬಂಧನ

* * * * * *

ದಿನಾಂಕ: 02.07.2021 ರಂದು 13.10 ಗಂಟೆಗೆ ಶ್ರೀ ಸುರೇಶ ಸಿ.ಬೆಂಡೆಗುಂಬಳ, ಪಿಐ ಸಿಇಎನ್ ಅಪರಾಧ ಪೊಲೀಸ್ ಠಾಣೆ ವಿಜಯಪುರ ರವರಿಗೆ ಖಚಿತ ಮಾಹಿತಿ ಬಂದ ಮೇರೆಗೆ, ಈ ವಿಷಯ ಕುರಿತು ಶ್ರೀ. ಅನುಪಮ್ ಅಗ್ರವಾಲ್, ಪೊಲೀಸ ಅಧೀಕ್ಷಕರು ವಿಜಯಪುರ, ಮತ್ತು ಶ್ರೀ ಆರ್.ಎಲ್.ಅರಸಿದ್ದಿ, ಹೆಚ್ಚುವರಿ ಪೊಲೀಸ ಅಧೀಕ್ಷಕರು ವಿಜಯಪುರ, ರವರ ಮಾರ್ಗದರ್ಶನದಲ್ಲಿ ಶ್ರೀ ಸುರೇಶ ಸಿ.ಬೆಂಡೆಗುಂಬಳ ಪಿಐ ಸಿಇಎನ್ ಪೊಲೀಸ್ ಠಾಣೆ ಇವರ ನೇತೃತ್ವದಲ್ಲಿ ಹಾಗೂ ಸಿಬ್ಬಂಧಿ ಜನರಾದ ಎಚ್.ಸಿ 1209, 1260, 1247, ಸಿಪಿಸಿ 961, 654, 697, 532, ಎಪಿಸಿ-121, ರವರು ಸೇರಿಕೊಂಡು, ಬಾತ್ಮಿ ಬಂದ ಸ್ಥಳ ಕೋಲ್ಹಾರ ಪಟ್ಟಣದ ಹರಣಶಿಕಾರಿ ಓಣಿಯಲ್ಲಿ ಹೋಗಿ ದಾಳಿ ಮಾಡಿ, ಆರೋಪಿತರು ತಮ್ಮ ಸ್ವಂತ ಲಾಭಕ್ಕಾಗಿ ಗಾಂಜಾ ಎಂಬ ಮಾದಕ ಪದಾರ್ಥವನ್ನು ಮಾರಾಟ ಮಾಡುವ ಉದ್ದೇಶದಿಂದ ಅಕ್ರಮವಾಗಿ ಸೋಮನಾಥ ತಂ। ಸಾಬಪ್ಪ ಮಾದರ ಇತನ ಪತ್ರಾಸ್ ಶೆಡ್ಡಿನ ಮನೆಯಲ್ಲಿ ಇಟ್ಟುಕೊಂಡಿದ್ದನ್ನು ಸಿ.ಇ.ಎನ್ ಅಪರಾಧ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿ ಜನರು ದಾಳಿ ಮಾಡಿ, **ಸುಮಾರು 500 ಗ್ರಾಂ.** ಗಾಂಜಾ, ಅದರ ಅಂದಾಜು ಕಿಮ್ಮತ್ತು 20,000/-ರೂ. ಕಿಮ್ಮತ್ತಿನ ಮಾಲನ್ನು ಜಪ್ತ ಮಾಡಿದ್ದು ಇರುತ್ತದೆ.

**ಆರೋಪಿತರಾದ**

1) ಸೋಮನಾಥ ತಂ। ಸಾಬಪ್ಪ ಮಾದರ, ವಯಾ-29 ವರ್ಷ, ಉದ್ಯೋಗ-ಕೂಲಿಕೆಲಸ, ಸಾ। ಬ್ಯಾಕೋಡ ತಾ। ಬ.ಬಾಗೇವಾಡಿ ಹಾಲಿ-ಹರಣಶೀಕಾರಿ ಓಣಿ, ಕೋಲ್ಹಾರ.
2) ಹಣಮಂತ ತಂ। ಸಂಕ್ರಪ್ಪ ಲಮಾಣಿ, ವಯಾ-62 ವರ್ಷ, ಉದ್ಯೋಗ-ಕೂಲಿಕೆಲಸ, ಸಾ। ರೇಲ್ವೆ ಸ್ಟೇಶನ್ ತಾಂಡಾ, ಆಲಮಟ್ಟಿ, ತಾ। ನಿಡಗುಂದಿ, **ಇವರನ್ನು ದಸ್ತಗೀರ ಮಾಡಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು ಇರುತ್ತದೆ.**

ಈ ಕುರಿತು ಶ್ರೀ ಸುರೇಶ ಸಿ.ಬೆಂಡೆಗುಂಬಳ ಪಿಐ ಸಿಇಎನ್ ಪೊಲೀಸ್ ಠಾಣೆ ರವರು ಕೊಟ್ಟ ಪಿರ್ಯಾದಿ ಮೇರೆಗೆ, ಸಿಇಎನ್ ಪೊಲೀಸ್ ಠಾಣೆಗುನ್ನಾ ನಂ 15/2021 ಕಲಂ ಕಲಂ;20(B)(ii)(A), 25 NDPS ACT-1985 ನೇದ್ದರ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು ಇರುತ್ತದೆ.

ಈ ದಾಳಿ ಪ್ರಕರಣದಲ್ಲಿ ಕರ್ತವ್ಯ ನಿರ್ವಹಿಸಿದ ಎಲ್ಲ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ಜನರನ್ನು ಮಾನ್ಯ ಪೊಲೀಸ್ ಅಧಿಕ್ಷಕರು ಶ್ಲಾಘಿಸಿ ಸೂಕ್ತ ಬಹುಮಾನವನ್ನು ಘೋಷಿಸಿರುತ್ತಾರೆ.

ಪೊಲೀಸ್ ಅಧೀಕ್ಷಕರು
ವಿಜಯಪುರ ಜಿಲ್ಲೆ

ಗೆ,

ಜಿಲ್ಲಾ ವಾರ್ತಾ ಮತ್ತು ಪ್ರಚಾರಾಧಿಕಾರಿಗಳು ವಿಜಯಪುರ.
ಹಾಗೂ ವಿಜಯಪುರ. ಜಿಲ್ಲೆಯ ಎಲ್ಲ ಪತ್ರಕರ್ತಕರು ಹಾಗೂ ಛಾಯಾಗ್ರಾಹಕರು

